# <u>ಹಿರಿಯ ಸಿವಿಲ್ ನ್ಯಾಯಾಧೀಶರ  ನ್ಯಾಯಾಲಯ, ಚಿತ್ತಾಪೂರ</u>

**ಅಸಲು ದಾವಾ  ನಂಃ 126/2021**
**ಡಿ .ಡಬ್ಲ್ಯೂಃ 1,**

**<u>ದಿನಾಂಕ :06-07-2026ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಪಾಟಿ ಸವಾಲು  :- ಶ್ರೀ ಜಿ ಜೆ ಕೆ ವಾದಿ ಪರ ವಕೀಲರಿಂದ</u>**

ನಾನು 10 ನೇ ತರಗತಿ ಓದಿದ್ದೇನೆ. ಈ ದಾವಾ ಆಸ್ತಿ ಹೊರತು ನನಗೆ ಸಂಬಂಧಿಸಿದ ಆಸ್ತಿಯ ಜಮೀನುಗಳ ಕುರಿತು ಕ್ರಯ, ಅಡಮಾನ ಮತ್ತು ಇತರ ವ್ಯವಹಾರಗಳನ್ನು ಮಾಡಿಲ್ಲ. ನಾನು ದಾವಾ ಆಸ್ತಿಯನ್ನು ಸುಧಾ ಗಂಡ ಬಸವರಾಜು ರವರಿಗೆ ರೂ .4,95,000/- ಕ್ಕೆ ಅಡಮಾನ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವ್ಯವಹಾರವನ್ನು ಮಾಡಿ ರದ್ದತಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಈ ದಾವಾ ಜಮೀನು ಮತ್ತು ಬೇರೆ ಜಮೀನುಗಳನ್ನು ವ್ಯವಹಾರ ಮಾಡಿದ್ದೇನೆ ಎಂದರೆ ಸರಿ.

ಈ ವಾದಿಗೆ ಮತ್ತು ಓ ಎಸ್ ನಂ. 125/21 ವಾದಿಗೆ ಇಬ್ಬರಿಗೂ ಒಂದೇ ದಿನ ಕರಾರು ಪತ್ರ ಬರೆದುಕೊಂಡಿದ್ದೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದು ಸಾಲದ ವ್ಯವಹಾರ ಪತ್ರ ಎಂದು ನುಡಿಯುತ್ತಾರೆ. ನಿ ಪಿ 1 ಕ್ಕೆ ನನ್ನ ಹೆಂಡತಿ ಸಹ ಒಪ್ಪಿಗೆ ಸಾಕ್ಷಿ ಸಹಿ ಹಾಕಿದ್ದಾರೆ ಎಂದರೆ ಸಾಕ್ಷಿ ಒತ್ತಾಯ ಪೂರ್ವಕವಾಗಿ ಸಹಿ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ಓ ಎಸ್ ನಂ.  125/21 ದಲ್ಲಿ ನನ್ನ ಹೆಂಡತಿ ಕೂಡ ಒಪ್ಪಿಗೆ ಸಾಕ್ಷಿ ಸಹಿ ಹಾಕಿದ್ದಾರೆ ಎಂದರೆ ಸರಿ. ವಾದಿಗೆ ಆಗಲಿ ಮತ್ತು  ಓ ಎಸ್ ನಂ.  125/21 ರಲ್ಲಿನ ವಾದಿಗೆ ನಾನು ಬರೆದುಕೊಟ್ಟ ದಾಖಲೆ ಅದು ಸಾಲದ ಪತ್ರ ಆಗಿದ್ದು ನೀವು ಮೋಸದಿಂದ ಕರಾರು ಪತ್ರ ಬರೆಸಿಕೊಂಡಿದ್ದೇನೆ ಎಂದು ನಾನು ನೋಟೀಸು ನೀಡಿಲ್ಲ ಮತ್ತು ಕಾನೂನು ಕ್ರಮ ಕೈಗೊಂಡಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಮತ್ತು  ಓ ಎಸ್ ನಂ.  125/21 ವಾದಿಗೆ ನನಗೆ ಮೊಸ ಮಾಡಿ ಕರಾರು ಪತ್ರ ಬರೆಸಿಕೊಂಡಿದ್ದಾರೆ ಎಂದು ಪೋಲೀಸರಿಗೆ ದೂರು ಸಲ್ಲಿಸಿದ್ದೇನೆ. ಈ ಕುರಿತು ಡಿ ವೈ ಎಸ್ ಪಿ ಇವರ ಕಛೇರಿಯಲ್ಲಿ ವಾದಿಯನ್ನು ಕರೆಯಿಸಿ ಮಾತುಕತೆ ಮಾಡಿ ನಾನು ಅವರಿಗೆ ಪಡೆದ ಸಾಲವನ್ನು ಮರುಪಾವತಿ ಮಾಡಿದ್ದು ಅವರು ರದ್ದತಿ ಪತ್ರವನ್ನು ಬರೆದುಕೊಡುತ್ತೇನೆ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ಕುರಿತು ನಾನು ದೂರು ಮಾಡಿದ ದಾಖಲೆ ಬಗ್ಗೆ ನನ್ನ ಬಳಿ ಪ್ರತಿ ಇದೆ. ಪೋಲೀಸರು ಯಾವುದೇ ಲಿಖಿತ ಆದೇಶ ಮಾಡಿಲ್ಲ ಆದರೆ ಹಣ ಪಡೆದು ಅವರ ಜಮೀನು ಮರಳಿ ಕೊಡಿ ಅಂತಾ ತಿಳಿಸಿರುತ್ತಾರೆ ಅಂತಾ

ನುಡಿಯುತ್ತಾರೆ. ಈ ಕೇಸಿನ ವಾದಿಯ ಮೇಲೆ ಓ ಎಸ್ ನಂ. 14/21 ಮತ್ತು ಓ ಎಸ್ ನಂ. 125/21 ವಾದಿಯ ಮೇಲೆ ಓ ಎಸ್ ನಂ. 13/21 ಕೆಳ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ಹಾಕಿದ ಎರಡೂ ದಾವೆಗಳಲ್ಲಿ ಈ ವಾದಿ ಮತ್ತು ಮಂಜುನಾಥ ಇವರ ಮೇಲೆ ದೂರು ನೀಡಿ ಅಲ್ಲಿ ಪೋಲೀಸರ ಮುಂದೆ ವಿಚಾರಣೆಯಾದ ಬಗ್ಗೆ ಈ ಸಂಗತಿಗಳನ್ನು ತಿಳಿಸಿಲ್ಲ ಎಂದರೆ ಸರಿ. ನಾನು ಸಲ್ಲಿಸಿದ ಓ ಎಸ್ ನಂ. 13/21 ಮತ್ತು ಓ ಎಸ್ ನಂ. 14/21 ಎರಡೂ ದಾವೆಗಳು ವಜಾ ಆಗಿವೆ ಎಂದರೆ ಸರಿ. ಎರಡೂ ದಾವೆಗಳು ವಜಾ ಆದ ಮೇಲೆ ಮೆಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ನಾನು ಈ ದಾವೆಯನ್ನು ಸಲ್ಲಿಸುವ ಮುಂಚೆ ಈ ಕೇಸಿನ ವಾದಿ ಮತ್ತು ಓ ಎಸ್ ನಂ. 125/21 ವಾದಿ ನೋಟೀಸ್ ಜೊತೆಗೆ ರೂ.3,00,000/- ಮೊತ್ತದ ಚಕ್ಕನ್ನು ಕಳುಹಿಸಿರುತ್ತಾರೆ ಎಂದರೆ ಸರಿ. ನಾನು ಎಂ ಎ ಜಾಕಿರ್ ವಕೀಲರ ಮುಖಾಂತರ ಪ್ರತ್ಯುತ್ತರ ನೀಡಿದ್ದೇನೆ ಮತ್ತು ಅವರು ಕಳುಹಿಸಿದ ಚಕ್ಕು ಸಹ ಮರಳಿ ಕಳುಹಿಸಿದ್ದೇನೆ ಎಂದು ನುಡಿಯುತ್ತಾರೆ. ಆ ಪ್ರತ್ಯುತ್ತರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ಕರಾರಿನ ಪ್ರಕಾರ 6 ತಿಂಗಳ ಮುದ್ದತ್ತು ಇತ್ತು. ಈ ಕೇಸಿನ ವಾದಿ ಮತ್ತು ಓ ಎಸ್ ನಂ. 125/21 ವಾದಿಗೆ ನನಗೆ ಹಣ ಬಂದು ಮುಟ್ಟಿಲ್ಲ ಅಂತಾ ನೋಟೀಸು ನೀಡಿಲ್ಲ. ಈ ಕೇಸಿನ ವಾದಿ ಮತ್ತು ಓ ಎಸ್ ನಂ. 125/21 ವಾದಿಗೆ ತಲಾ ರೂ.21,00,000/- ಅಂತಾ ಖರೀದಿ ವ್ಯವಹಾರ ಆಗಿತ್ತು ಎಂದರೆ ಸರಿಯಲ್ಲ. ಈ ಕೇಸಿನ ವಾದಿ ಮತ್ತು ಓ ಎಸ್ ನಂ. 125/21 ವಾದಿ ಜನವರಿ 2015 ರಿಂದ ಡಿಸೆಂಬರ್ 2015ರ ವರೆಗೆ ಇಬ್ಬರು ತಲಾ ರೂ.18,00,000/- ನೀಡಿದ್ದಾರೆ ಎಂದರೆ ಸರಿಯಲ್ಲ.

ಈ ಕೇಸಿನ ವಾದಿ ಮತ್ತು ಅವರ ತಂದೆ ಶಿವಮಂದ್ರಪ್ಪ ಮತ್ತು ಓ ಎಸ್ ನಂ. 125/21 ಕೇಸಿನ ವಾದಿ ತಲಾ ರೂ.3,00,000/- ಜೊತೆಗೆ ಖರೀದಿ ಪತ್ರ ಬರೆದುಕೊಡು ಅಂತಾ ನನ್ನನ್ನು ಭೇಟಿ ಯಾಗಿರುತ್ತಾರೆ ಎಂದರೆ ಸಾಕ್ಷಿಯು ನಾನು ಖರೀದಿಗೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಇದೇ ರೀತಿ ನಾನು ಕಾಲಾವಕಾಶ ಮುಂದೂಡೂತ್ತಾ 2019 ರಲ್ಲಿ ಕೋವಿಡ್ ಬಂದ ಕಾರಣ 2021 ರಲ್ಲಿ ವಾದಿಯವರು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿ ಪಿ 1 ಒಂದು ಪ್ರತಿ ನನ್ನ ಬಳಿ ಇದೆ. ನನ್ನ ಬಳಿ ನಿ ಪಿ 1 ರ ಒಂದು ಪ್ರತಿ ಇದ್ದು ವಾದಿಗೆ ನಾನು ಬರೆದುಕೊಟ್ಟ ದಾಖಲೆ ಬೇರೆ ಮತ್ತು ನೀವು ಬರೆಸಿಕೊಂಡ ದಾಖಲೆ ಕರಾರು ಪತ್ರ ಆಗಿದ್ದು ಯಾಕೆ ಪ್ರಶ್ನಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಹೋಗಿ ಕೇಳಿರುತ್ತೇನೆ ಈ ವ್ಯವಹಾರ ತಾತ್ಕಾಲಿಕ ವಾಗಿರುತ್ತದೆ ಹಣ

ಮುಟ್ಟಿಸು ಅಂತಾ ನನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಬಳಿ ವಾದಿಯರಿಗೆ ಹಣ ಮರುಪಾವತಿ ಮಾಡಿದ ಬಗ್ಗೆ ದಾಖಲೆ ಇದೆ. ಹಣ ಮುಟ್ಟಿದೆ ಎಂದು ನನ್ನ ಒಂದು ಬುಕ್ಕಿನಲ್ಲಿ ಬರೆದುಕೊಟ್ಟಿದ್ದಾರೆ. ನಂತರ ನಾನು ಮತ್ತು ನನ್ನ ತಮ್ಮ ವಾದಿ ಮತ್ತು ಇನೊಂದು ಕೇಸಿನ ವಾದಿಗೆ ರೂ.5,00,000/- ಹಣ ನೀಡಿದ್ದೇನೆ ಎಂದು ನುಯುತ್ತಾರೆ. ವಾದಿ ಕಡೆ ರೂ.6,20,000/- ಪಡೆದಿದ್ದೆ ಅವರಿಗೆ ರೂ.20,00,000/- ಮರುಪಾವತಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ರೂ.20,00,000/- ಹಣವನ್ನು ಈ ಕೇಸಿನ ವಾದಿ ಮತ್ತು ಓ ಎಸ್ ನಂ. 125/21 ರ ವಾದಿಯರ ನಡುವೆ ಹಣ ನೀಡಿದ್ದೇನೆ ಎಂದು ನಡಿಯುತ್ತಾರೆ.

ನಾನು ಈ ಕೇಸಿನ ವಾದಿ ಮತ್ತು ಓ ಎಸ್ ನಂ. 125/21 ರ ವಾದಿಯರ ನಡುವೆ ಹಣ ನೀಡಿದ್ದೇನೆ ಎಂದು ಯಾವುದೇ ಲಿಖಿತ ದಾಖಲೆ ಇಲ್ಲ ಆದರೆ ಅವರಿಂದ ಪಡೆದ ಸಾಲಕ್ಕೆ ಅಡಜೆಸ್ಟ್ ಮಾಡಿಕೊಳ್ಳುತ್ತಾರೆ ಎಂದು ತಿಳಿಸಿರುತ್ತಾರೆ  ಎಂದು ನುಡಿಯುತ್ತಾರೆ. ನಾನು ವಾದಿಯಿಂದ ಸಾಲ ಪಡೆದಿದ್ದೆ ಅವರಿಗೆ ರೂ.20,00,000/- ಹಣ ಮರು ಪಾವತಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಕೇಸಿನ ವಾದಿ ಮತ್ತು ಓ ಎಸ್ ನಂ. 125/21 ರ ವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇ ಎಂದು ಅವರಿಂದ ತಲಾ ರೂ.18,00,000/- ಸ್ವೀಕರಿಸಿ ಈಗ ಅದು ಸಾಲದ ವ್ಯವಹಾರ ಅವರಿಗೆ ರೂ.20,00,000/- ಮರುಪಾವತಿ ಮಾಡಿದ್ದೇನ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ 11 ಇ ನಕ್ಷೆ, ಎನ್ ಓ ಸಿ ದಾಖಲೆ, ಕ್ರಯಕ್ಕೆ ಬೇಕಾದ ದಾಖಲೆಗಳನ್ನು ಜೋಡಿಸ ಬೇಕಾಗಿದ್ದು ಈ ಕಾರಣದಿಂದ ನಾನು ಖರೀದಿ ಪತ್ರ ಬರೆದುಕೊಡಲು ನಾನು ಮುಂದೂಡೂತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ಡಿ ವೈ ಎಸ್ ಪಿಯವರಿಗೆ ದೂರು ನೀಡಿದ್ದೆ ಅವರು ವಿಚಾರಣೆ ಮಾಡಿ ರಾಜಿ ಮಾಡಿಸಿ ಅವರಿಗೆ ಹಣ ಮರುಪಾವತಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಜಮೀನನ್ನು ನಾನೇ ಸಾಗುವಳಿ ಮಾಡತ್ತೇನೆ. ನಾನು ಖರೀದಿ ಪತ್ರ ಬರೆದುಕೊಡಲು ತಡವಾಗುತ್ತದೆ ಎಂದು ತಿಳಿಸಿದು ವಾದಿಯರಿಗೆ ದಾವಾ ಆಸ್ತಿ ಸ್ವಾ ದೀನ ನೀಡಿ  ಸಾಗುವಾಳಿ ಮಾಡಲು ವಾದಿಯರಿಗೆ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಂದ ತಲಾ ರೂ.18,00,000/- ಪಡೆದು ಕರಾರು

ಪತ್ರ ಬರೆದುಕೊಟ್ಟು ಈಗ ಅವರಿಗೆ ಖರೀದಿ ಪತ್ರ ಬರೆದುಕೊಡದೆ ನಾನು ಮೋಸ ಮಾಡುತ್ತಿದ್ದೇನ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**